**ರಾಗ – ಬಿಲಹರಿ ತಾಳ – ಆಟತಾಳ**

ರತುನ ದೊರಕಿತಲ್ಲ ಎನಗೆ ದಿವ್ಯ ।
ರತುನ ದೊರಕಿತಲ್ಲ । ಪ ।
ರತುನ ದೊರಕಿತು ಎನ್ನ ಜನುಮ ಪ–
ವಿತ್ರವಾಯಿತು ಈ ದಿನದಿ ನಾ–
ಯತನ ಗೈಯುತ ಬರುತಿರಲು ಪ್ರ–
ಯತನವಿಲ್ಲದೆ ವಿಜಯರಾಯರೆಂಬೊ ॥ ಅ ॥

ಪಥದಿ ನಾ ಬರುತಿರಲು ಥಳಥಳವೆಂದು
ಅತಿಕಾಂತಿ ಝುಳಪಿಸಲು ಬೆರಗಾಗುತ್ತ
ಅತಿಚೋದ್ಯವ ಕಾಣಲು ಸೇವಿಸುತಿರೆ
ಸತತ ಕರಪಿಡಿದಾದರಿಸಿ ಮನೋ–
ರಥವ ಪೂರೈಸುತಲಿ ದಿವ್ಯ ಸನ್ಮತಿಯ ಪಾಲಿಸಿ
ಮೋಕ್ಷಸು ಪಥವ ಅತಿಶಯದಿ ತೋರುತ್ತ ಪೊರೆದ ॥ ೧ ॥

ಜ್ಞಾನವೆಂಬೊ ಪುತ್ಥಳಿ ಕಂಬಿಯಲ್ಲಿ
ಆಣಿಮುತ್ತಿನ ಭಕ್ತಿಲಿ ಸುಕೃತಮಾಲಾ
ನಾನಾವಿಧ ಹವಳದಲಿ ಸೇರಿಸುತಲಿ
ಪ್ರಾಣಪದಕವೆಂಬ ಮಾಲೆಯನು ಅನು
ಮಾನವಿಲ್ಲದೆ ಕೊರಳ್ಗಿಗಾಕುತ ಗಾನದಿಂ
ಕುಣಿಯುತ್ತ ಪಾಡುತ್ತ ದೀನಜನರುದ್ಧಾರಗೈಯುವ ॥ ೨ ॥

ಶೋಧಿಸಿ ಗ್ರಂಥಗಳ ಸುಳಾದಿಯ
ಮೋದದಿಂದಲಿ ಬಹಳ ಕವಿತೆ ಮಾಡಿ

ಸಾಧುಜನಕೆ ಸಕಲ ಆನಂದವಿತ್ತು
ವಾದಿಜನರನು ಗೆದ್ದು ಬೋಧಿಸಿ
ಮಾಧವ ಜಗನ್ನಾಥವಿಠಲನ ಪಾದಕಮಲಕೆ
ಮಧುಪನಂದದಿ ಸಾದರದಿ ತೋರುತ್ತ ಮೆರೆಯುವ ॥ ೩ ॥
(ಜಗನ್ನಾಥದಾಸರು ವಿಜಯದಾಸರನ್ನು ಕೊಂಡಾಡಿ ಸ್ತುತಿಸಿದ ಗೀತೆ)

**ರಾಗ – ಶಂಕರಾಭರಣ : ತಾಳ – ಅಟತಾಳ**

ಸಾರಿ ಭಜಿಸಿರೊ ಟೀಕಾರಾಯರಂಘ್ರಿಯ ।
ಘೋರಪಾತಕಾಂಬುಧಿಯ ಪಾರಮಾಳ್ಪರ ।ಪ।
ಮೋದತೀರ್ಥರ ಮತವ ಸಾಧಿಸುವರ ।
ಪಾದಸೇವ್ಯರ ದುರ್ಬೋಧ ಕಳೆವರ ।೧।
ಭಾಷ್ಯತತ್ವವ ವಿಸ್ತಾರ ಮಾಳ್ಪರ ।
ದೋಷದೂರರ ಆದಿಶೇಷಾವೇಶರ ।೨।
ಕಾಮಗೆದ್ದರ ಹರಿಗೆ ಪ್ರೇಮಪೂರ್ಣರ ।
ನೇಮನಿತ್ಯರ ನಿಷ್ಕಾಮನಾಪರ ।೩।
ಮೋಕ್ಷದಾತರ ಅಕ್ಷೋಭ್ಯತೀರ್ಥರ ।
ಸಾಕ್ಷಿಲಿಪ್ಪರ ಅಪೇಕ್ಷರಹಿತರ ।೪।
ವಿಜಯವಿಟ್ಠಲನ ಅಂಘ್ರಿ ಭಜನೆ ಮಾಳ್ಪರ
ಕುಜನಭಂಜರ ದಿಗ್ವಿಜಯರಾಯರ ।೫।

ರಾ ಗ – ತೋ ಡಿ : ತಾ ಳ – ಆ ದಿ ತಾ ಳ

ಶಂಭೋ ಸ್ವಯಂಭುಸಂಭವ ನಂಬಿದೆ ಕಾಯೊ
ಜಂಭಾರಿನುತ ಅಭವ ।ಪ।
ಅಂಬರಪುರಹರ ಸಾಂಬ ತ್ರಿಯಂಬಕ
ಶಂಬರಾರಿರಿಪು ಗಂಭೀರ ಕರುಣೀ ।ಅ ಪ।
ಭಸಿತಭೂಷಿತ ಶರೀರ ಭಕ್ತರಾಧಾರ
ವಿಷಕಂಠ ದುರಿತಹರ
ಪಶುಪತಿ ಫಣಿಪಹಾರ ಪಾವನ್ನಕರ
ತ್ರಿಶೂಲಡಮರುಗಧರ
ನೊಸಲನಯನ ವಿಕಸಿತ ಅಂಬುಜಮುಖ
ಶಶಿಧರ ಮೂಕರಕ್ಕಸಮದಮರ್ದನ
ಘಸಣೆಗೊಳಿಸುವ ತಾಮಸವ ಕಳೆದು ಮಾ–
ನಸದಲಿ ರಂಗನ ಬಿಸಜಪಾದವ ತೋರೊ ।೧।

ರಜತಪರ್ವತನಿವಾಸ ನಿರ್ಮಲಭಾಸ
ಗಜದೈತ್ಯನಾಶ ಗಿರೀಶ
ಸುಜನರ ಮನೋವಿಲಾಸ ವ್ಯೋಮಕೇಶ
ತ್ರಿಜಗದಲ್ಲಣ ಗೌರೀಶ
ಅಜಸುತನಧ್ವರ ಭಜನೆಯ ಗೈಸಿದ
ಅಜಗರಮಂದಿರ ಗಜಮುಖ ಜನಕನೆ
ಗಜಗಮನನ ತನುಜನನ್ನು ಕಾಯ್ದವನೆ
ವ್ರಜಮುನಿ ವಂದಿತ ಭಜಿಸುವೆ ನಿನ್ನ ।೨।

ಮಧುರಾಪುರೀ ನಿಲಯ ಮೃತ್ಯುಂಜಯ
ಸದಮಲ ಸುಮನಸಗೇಯ
ಸದಾ ನಮಿಪರ ಹೃದಯಸ್ತ ಚಕ್ಕನಾಥ
ಸದೆ ಪಾಪ ಕೊಡು ಅಭಯ
ಸದಾಶಿವ ಜಾನ್ಹವೀಧರ ಕೃತಮಾಲಾ
ನದೀತೀರದಿ ವಾಸವಾಗಿಪ ಸೌಂದರ್ಯ
ಮಧುರಿಪು ವಿಜಯವಿಠ್ಠಲನ ಪದಾಬ್ಜಕೆ
ಮಧುಪನೆನಿಪ ಪಂಚವದನ ಕೈಲಾಸ ।೩।

ರಾಗ – ಕಾಂಬೋದಿ : ತಾಳ – ಝಂಪೆ ತಾಳ

ಕೈಲಾಸವಾಸ ಗೌರೀಶ ಈಶ ।ಪ।
ತೈಲಧಾರೆಯಂತೆ ಮನಸು ಕೊಡು ಹರಿಯಲ್ಲಿ ಶಂಭೋ ।ಅ ಪ।

ಅಹೋ ರಾತ್ರಿಯಲಿ ನಾನು ಅನುಚರಾಗ್ರಣಿಯಾಗಿ
ಮಹಿಯೊಳಗೆ ಚರಿಸಿದೆನೊ ಮಹದೇವನೆ
ಅಹಿಭೂಷಣನೆ ಎನ್ನ ಅವಗುಣಗಳೆಣಿಸದಲೆ
ವಿಹಿತ ಧರ್ಮದಿ ಕೊಡು ವಿಷ್ಣು ಭಕುತಿಯನು ಶಂಭೋ ।೧।

ಮನಸು ಕಾರಣವಲ್ಲ ಪಾಪ ಪುಣ್ಯಕ್ಕೆಲ್ಲ
ಅನಲಾಕ್ಷ ನಿನ್ನ ಪ್ರೇರಣೆಯಲ್ಲದೆ
ದನುಜ ಗಜ ಮದ ಹಾರಿಯೆ ದಂಡ ಪ್ರಣಾಮವ ಮಾಳ್ಪೆ
ಮಣಿಸು ಈ ಮನವ ಸಜ್ಜನರ ಚರಣದಿ ಶಂಭೋ ।೨।

ಭಾಗೀರಥೀಧರನೆ ಭಯವ ಪರಿಹರಿಸು ಲೇ
ಸಾಗಿ ಒಲಿದು ಸಂತತ ಶರ್ವದೇವ
ಭಾಗವತ ಜನಪ್ರೀಯ ವಿಜಯವಿಟ್ಠಲನಂಘ್ರಿ
ಜಾಗುಮಾಡದೆ ಭಜಿಪ ಭಾಗ್ಯವನು ಕೊಡು ಶಂಭೋ ।೩।

ರಾಗ – ತೋಡಿ : ತಾಳ – ಆದಿತಾಳ

ಪವಮಾನ ಜಗದ ಪ್ರಾಣ ಸಂಕರುಷಣಭವ
ಭವಾರಣ್ಯ ದಹನ ।ಪ।

ಶ್ರವಣವೆ ಮೊದಲಾದ ನವವಿಧ ಭಕುತಿಯ
ತವಕದಿಂದಲಿ ಕೊಡು ಕವಿಗಳ ಪ್ರಿಯ ।ಅ ಪ।

ಹೇಮ ಕಚ್ಚುಟ ಉಪವೀತ ಧರಿಪ ಮಾರುತ
ಕಾಮಾದಿ ವರ್ಗರಹಿತ
ವ್ಯೋಮಾದಿ ಸರ್ವ ವ್ಯಾಪುತ ಸತತ ನಿರ್ಭೀತ
ರಾಮಚಂದ್ರನ ನಿಜದೂತ
ಯಾಮಯಾಮಕೆ ನಿನ್ನಾರಾಧಿಪುದಕೆ
ಕಾಮಿಪೆ ಎನಗಿದು ನೇಮಿಸಿ ಪ್ರತಿದಿನ
ಈ ಮನಸಿಗೆ ಸುಖಸ್ತೋಮವ ತೋರುತ
ಪಾಮರ ಮತಿಯನು ನೀ ಮಾಣಿಪುದು ।೧।

ವಜ್ರ ಶರೀರ ಗಂಭೀರ ಮಕುಟಧರ
ದುರ್ಜನ ವನಕುಠಾರ
ನಿರ್ಜರಮಣಿ ದಯಾಪಾರ ವಾರ ಉದಾರ
ಸಜ್ಜನರಘ ಪರಿಹಾರ
ಅರ್ಜುನಗೊಲಿದಂದು ಧ್ವಜವಾನಿಸಿ ನಿಂದು
ಮೂರ್ಜಗವರಿವಂತೆ ಗರ್ಜನೆ ಮಾಡಿದೆ
ಹೆಜ್ಜೆ ಹೆಜ್ಜೆಗೆ ನಿನ್ನ ಅಬ್ಜಪಾದದ ಧೂಳಿ
ಮಜ್ಜನದಲಿ ಭವವರ್ಜಿತನೆನಿಸೊ ।೨।

ಪ್ರಾಣ ಅಪಾನ ವ್ಯಾನ ಉದಾನ ಸಮಾನ
ಆನಂದ ಭಾರತಿ ರಮಣ
ನೀನೆ ಶರ್ವಾದಿ ಗೀರ್ವಾಣಾದ್ಯರಿಗೆ
ಜ್ಞಾನಧನ ಪಾಲಿಪ ವರೇಣ್ಯ
ನಾನು ನಿರುತದಲಿ ಏನೇನೆಸಗಿದ
ಮಾನಸಾದಿ ಕರ್ಮ ನಿನಗೊಪ್ಪಿಸಿದೆನೊ
ಪ್ರಾಣನಾಥ ಸಿರಿ ವಿಜಯವಿಟ್ಠಲನ
ಕಾಣಿಸಿ ಕೊಡುವುದು ಭಾನುಪ್ರಕಾಶ ।೩।

ರಾಗ – ತೋಡಿ : ತಾಳ – ಆದಿತಾಳ

ಕಾಯೆ ಕರುಣಾಂಬುಧಿಯೆ ಇಂದಿರಾದೇವಿ ।ಪ।
ಕಾಯೆ ಕರುಣಾಂಬುಧಿ ಮಾಯೆ ನಾರಾಯಣನ
ಜಾಯೆ ಸತತ ಜ್ಞಾನವೀಯೆ ಭಕ್ತರ ಪ್ರೀಯೆ ।ಅ ಪ।

ಕನ್ಯಾಮಣಿಯೆ ಕಾಮಿನಿ ಮಂಗಳವಾಣಿ ।
ಸನ್ನುತೆ ಲೋಕಜನನಿ ॥
ನಿನ್ನ ಚರಣಯುಗ್ಮವನ್ನು ನಂಬಿದೆ ಸುಪ್ರ- ।
ಸನ್ನೆ ಸರ್ವಜೀವ ಭಿನ್ನೆ ಭಾಗ್ಯಸಂಪನ್ನೆ ।
ಮನ್ನಿಸು ದಯದಿ ನೀ ಬಿನ್ನಪ ಲಾಲಿಸಿ ।
ಚೆನ್ನೆ ಚಕ್ರಪಾಂಚಜನ್ಯವಿರಾಜಿತೆ । ೧ ।

ಅತಿ ದಯವಂತೆ ನೀನೆಂದು ಬೇಗದಿ ಬಂದು ।
ತುತಿಸುವೆ ದೀನ ನಾನೆಂದು ॥
ಪತಿತರೊಳಿಡದಲೆ ಗತಿಗೆ ಸಮ್ಮತಳಾಗು-
ತ್ಪತ್ತಿ-ಸ್ಥಿತಿ-ಲಯಕರ್ತೆ ಅತುಳ ಶೋಭನ ಮೂರ್ತೆ ।
ಪತಿಯಲಿ ಜನಿಸಿ ನೀ ಪತಿಗೆ ಸತಿಯಾದೆ ।
ಪತಿಯ ಸಂಗಡ ಧ್ಯಾನಿತಳಾದೆ ಚರಿತೆ । ೨ ।

ಕುಂಕುಮಾಂಕಿತೆ ರಾಜಿತೆ ನಿಗಮಗೀತೆ ।
ಪಂಕಜಾಸನ ಮಾತೆ ॥
ಲೋಕವತ್ಸಲೆ ಸರ್ವಾಲಂಕಾರಮಯೆ ರವಿ-
ಸಂಕಾಶೆ ಬಹುಕಾಲ ಸಂಕಟವಿನಾಶೆ ॥
ಮಂಕುಮತಿಹರ ವಿಜಯವಿಟ್ಠಲನ ।
ಸಂಕಲ್ಪಕೆ ಕಳಂಕ ಬಾರದೆ । ೩ ।

ರಾ ಗ – ಪ ಂ ತು ವ ರಾ ಳಿ : ತಾ ಳ – ರೂ ಪ ಕ ತಾ ಳ

ಜಗಪತಿಯ ತೋರಮ್ಮ ಎನಗೆ ಕರುಣವ ಮಾಡಮ್ಮ ।ಪ।

ಅಘಗಳ ಕಳೆವ ಅಮೋಘ ದೇವನ
ಭಕುತರ ಕಾವನ ಎನ್ನಯ ಜೀವನ ।ಅ ಪ।

ಮೃಗಲಾಂಛನವದನೆ ಮೃದು ಸರಸಿಜಸದನೆ
ಹಗಲು ಇರುಳು ನಿನ್ನ ಸಂ–
ಯೋಗನ್ನ। ಅನಂತ ಭೋಗನ್ನ ಕಿರೀಟಿಯ ಬೀಗನ್ನ ।೧।

ಭ್ರಮರ ಕುಂತಳೆ ಜಾಣೆ।ಸುಮನ ಕೋಕಿಲ ಗಾನೆ
ಕಮಲ ತುಲಸಿ ಹಾರನ್ನ। ಜಗದಾಧಾರನ್ನ। ದಶಾವತಾರನ್ನ ।೨।

ಅಜರಾಮರಣ ಸಿದ್ಧಿ।ತ್ರಿಜಗದೋಳ್ ಪ್ರಸಿದ್ಧಿ
ವಿಜಯವಿಟ್ಠಲ ಶ್ರೀನಿವಾಸನ್ನ।ತಿರುವೆಂಗಳೇಶನ್ನ ಜಗವ ಪೋಷನ್ನ। ೩ ।

ರಾ ಗ – ತೋ ಡಿ : ತಾ ಳ – ರೂ ಪ ಕ ತಾ ಳ

ಎಂದಿಗಾಹುದೋ ನಿನ್ನ ದರುಶನ
ಅಂದಿಗಲ್ಲದೇ ಬಂಧ ನೀಗದೋ ।ಪ।
ಗಾನಲೋಲ ಶ್ರೀವತ್ಸಲಾಂಛನ
ದಾನವಾಂತಕ ದೀನರಕ್ಷಕ ।೧।

ಆರಿಗೆ ಮೊರೆ ಇಡಲೊ ದೇವ ಕೃಷ್ಣ ಹರೀ ನೀ
ಸಾರಿ ಬಂದು ಕಾಯೊ ಬೇಗ ।೨।
ಗಜವ ಪೊರೆದೆ ಗರುಡಗಮನನೆ
ತ್ರಿಜಗಭರಿತ ವಿಜಯವಿಟ್ಠಲನೆ ।೩।

ರಾಗ – ಮೋಹನ : ತಾಳ – ಆದಿತಾಳ

ಇಂಥಾ ಪ್ರಭುವ ಕಾಣೆನೊ ಈ ಜಗದೊಳ–
ಗಿಂಥಾ ಪ್ರಭುವ ಕಾಣೆನೊ ।ಪ।

ಇಂಥಾ ಪ್ರಭುವ ಕಾಣೆ ಶಾಂತಮೂರುತಿ ಜಗ
ದಂತರಂಗನು ಲಕ್ಷ್ಮೀಕಾಂತಽ ಸರ್ವಾಂತರ್ಯಾಮಿ ।ಅ ಪ।

ಬೇಡಿದಿಷ್ಟವ ಕೊಡುವ ಭಕ್ತರ ತಪ್ಪು ನೋಡದೆ ಬಂದು ಪೊರೆವ
ಗಾಡಿಕಾರನು ಗರುಡಾರೂಢ ಗುಣವಂತ ಮಹಾ
ಪ್ರೌಢಪ್ರತಾಪಿ ಜಗದಿ ಗೂಢದಿಂ ಸಂಚರಿಪ
ಪಾಡಿ ಪೊಗಳಿ ಕೊಂಡಾಡುವವರ ಮುಂದಾಡುತಲಿಪ್ಪನು ನಾಡೊಳಗಿದ್ದರು
ಕೇಡಿಗನೇ ನಾಡಾಡಿಗಳಂದದಿ ಈಡುಂಟೇನೋ ಈ ವೇಂಕಟಗಿಂಥಾ। ೧ ।

ನಿಗಮತತಿಗಳರಿಯದ ನೀರಜಭವಾದ್ಯಗಣಿತ ಸುರರು ಕಾಣದ
ಜಗದೊಡೆಯನು ಭಕ್ತರುಗಳಿಗೊಲಿದು ತ್ರಿಸ್ಥಾನಗಳ ತ್ಯಜಿಸಿ ಕಲಿ
ಯುಗದಿ ಭೂಮಿಗೆ ಬಂದು ಅಗಣಿತಸುಗುಣಾರ್ಣವ ಶ್ರೀಹರಿಯೇ
ಜಗದೊಳು ಸೇವಾದಿಗಳನು ಕೊಳುತಿಹ ಅಘಹರ ಮೋಕ್ಷಾ–
ದಿಗಳನೆ ನೀಡುತ ನಗೆಮೊಗದಲಿ ಚನ್ನಿಗ ನಿಂತಿಹನೊ ।೨।

ಭಾರ್ಗವೀ ಭೂಮಿ ವಲ್ಲಭ ಭವದೂರ ಭಕ್ತವರ್ಗಕ್ಕೆ ಇವ ಸುಲಭ
ನಿರ್ಗುಣ ನಿರ್ವಿಕಾರ ಸ್ವರ್ಗದೈಶ್ವರ್ಯಕಿಂತಾ-
ನರ್ಘ್ಯ ಪದವನೀವ ದೀರ್ಘಾಯುವಂತನೀತ
ಭಾರ್ಗವರಾಮ ನೃಪರ್ಗಳೆಲ್ಲರಣಾಗ್ರದಿ ಜಯಿಸಿದ ಉಗ್ರಪ್ರತಾಪಿ
ಅಗ್ರಗಣ್ಯ ಸದ್ವಿಗ್ರಹ ಶ್ರೀಮದನುಗ್ರಹ ಮಾಡುತ ದುರ್ಗುಣ ಕಳೆವ।೩।

ನಿರ್ದುಃಖಾನಂದ ಭರಿತಾ ನಿರ್ವಾಣಸುಖಕೆ ಆರ್ದ್ರಹೃದಯ ತೋರಿದ
ನಿದ್ರೆಯೊಳಗಿದ್ದವಗುಪದ್ರ ಬಿಡಿಸಿ ದೈತ್ಯ ಕ್ಷುದ್ರನ್ನಾ ಕೊಲಿಸಿ ಸು-
ಭದ್ರ ಜಗಕೆ ಇತ್ತ ನಿರ್ದಯನಲ್ಲ ಸಮುದ್ರಶಯನ ಗೋ-
ವರ್ಧನ ಗಿರಿಯನು ಉದ್ಧರಿಸಿದ ಯದುವರ್ಧನ ದನುಜ ವಿ-
ಮರ್ದನ ಲಕ್ಷ್ಮೀಜನಾರ್ದನ ವರಶೇಷಾದ್ರಿ ನಿವಾಸ ।೪।

ವಾರಿಜಾಸನ ಮನ್ಮಥಾ ಊರ್ವರು ಸುತರು ಸರತರಂಗಿಣಿ ತನುಜಾ
ಪುರವೇ ವೈಕುಂಠ ಇಂದ್ರಾದ್ಯಮರರು ಕಿಂಕರರು ಗರುಡ ವಾಹನ
ಉರಗ ಪರಿಯಂಕ ನಿಷ್ಕಳಂಕ ಸರಿ ದೊರೆಗಳ ನಾ-
ನರಿಯೆನು ವೆಂಕಟಗಿರಿಯಲಿ ಇರುತಿಹ ಕರುಣೆಗಳರಸನೆ
ಮರೆಯದೆ ಸಲಹೋ ಶರಣಾಗತರನು ಮರುತಾಂತರ್ಗತ ಸಿರಿವಿಜಯವಿಟ್ಠಲ।೫।

### ಆಪತ್ತು ಪರಿಹಾರ ಉಗಾಭೋಗ : ರಾಗ – ಅಠಾಣ

ಒಂದು ಕೈಯಲ್ಲಿ ಖಡ್ಗ ಒಂದು ಕೈಯಲ್ಲಿ ಹಲಗೆ
ಅಂದವಾಗಿ ಪಿಡಿದು ದಿವಾರಾತ್ರಿಯಲಿ
ಬಂದು ಬದಿಯಲಿ ನಿತ್ಯ ಬಾರಾಸನಾಗಿ
ಹಿಂದುಮುಂದುಪದ್ರವಾಗದಂತೆ

ಇಂದಿರೆರಮಣ ಕಾಯುತ್ತಲಿರೆ ಎನಗಾವ
ಬಂಧನಗಳಿಲ್ಲ ಧನ್ಯ ಧನ್ಯ
ಕಂದರ್ಪನಯ್ಯ ಸಿರಿವಿಜಯವಿಟ್ಠಲರೇಯ
ಎಂದೆಂದಿಗಾಪತ್ತು ಬರಲೀಸನೊ

### ಉಗಾಭೋಗ : ರಾಗ – ಪಂತುವರಾಳಿ

ಕೋಟಿ ಕೋಟಿ ಜನ್ಮಕೆ ನಿನ್ನ ನಾಮವು ಒಂದೇ ಸಾಕು
ದಾಟಿಸುವುದು ಭವಸಾಗರವ
ಬೂಟಕತನದಲಿ ಹರಿದಾಸನಾದರೆ
ತೋಟವಿಲ್ಲದೆ ಮೋಟಿಯೆತ್ತಿದಂತೆ
ನೀಟಾಗದು ಕಾಣೋ ಎಂದಿಗೂ ಯಮ ಭಟರ
ಕಾಟ ತಪ್ಪದೊ ಕಾಶಿಯಲ್ಲಿದ್ದರೂ
ಹಾಟಕಾಂಬರಧರ ವಿಜಯವಿಟ್ಠಲರೇಯ
ನಾಟಿಸೊ ನಿನ್ನ ಚರಣಾಬ್ಜದಲಿ ಮನಸು

ಸುಳಾದಿಗಳು –

ನನ್ನದಲ್ಲ ನನ್ನದಲ್ಲ ಏನೇನು ಚರಿಸುವ ।
ನಾನಾ ವ್ಯಾಪಾರವು ಅನಂತ ಕಲ್ಪದಲ್ಲಿ ।
ನೀನೆ ವ್ಯಾಪಕನಾಗಿ ನಾನಾಕ ಪರಿಯಲ್ಲಿ ।
ನೀನಾಡಿಸುವೆ ಅಭಿಮಾನದೊಡಿಯನಾಗಿ ।
ಸ್ನಾನ ಸಂಧ್ಯಾವಂದನೆ ಮೌನ ದಾನ ಜಪವ ।
ಏಣಿಸುವದು ಸರ್ವ ನಾನಾ ಪ್ರಪಂಚಗಳು ।
ಆನಂದ ಶ್ರವಣ ಮನನ ।
ಧ್ಯಾನ ಮೂರುತಿ ಉಪಾಸನ ಗಾಯನ ಜ್ಞಾನ ।
ದ್ಯುನಾಥ ಉಡುಪ ಗ್ರಹಣ ಪರ್ವಣಿ ಗಂಗೆ ।
ಭಾನು ನಂದನೆ ಕೃಷ್ಣವೇಣಿ ವಾಣಿ ಕಾವೇರಿ ।
ಆ ನರ್ಮದಾ ಗೋದೆ ಭವನಾಶಿ ತುಂಗೆ ಮಿಕ್ಕಕ್ಕೆ ।
ದಾನಾದಿ ಮತ್ತೆ ಕುಂಭಕೋಣ ಗಯಾ ಪ್ರಯಾಗ ।
ಆನಂದವನ ಸೇತು ಆನೆಪರ್ವತ ಶ್ರೀರಂ– ।
ಗನಾಥ ಹೇಮಗಿರಿ ಅನಂತಶಯನ ಜನಾರ್ಧನ ।
ನಾನಾಕ ಪುಣ್ಯನಿಧಿ ಪಾಪಾ ಸಂತಾಪವನು ಚರಿತ್ರ ವ್ರತೆ ।
ವಾನಪ್ರಸ್ತ ಮುಂತಾದ ಏನೇನು ಧರ್ಮ ಸರ್ವ ।
ನೀನನುಕೂಲವಾಗಿ ದೀನ ನರಗೆ ಮುಖ್ಯ– ।
ಪ್ರಾಣನಿಂದಲಿ ನಿತ್ಯನಾಡಿಸಿದರಿಂದ ।
ನಾನೆ ಧನ್ಯನು ಬಲು ಅನಂತ ಜನುಮದಲ್ಲಿ ।
ದಾನವ ಮರ್ದನಾ ವಿಜಯವಿಠ್ಠಲರೇಯ ।
ನಾನೆ ಸ್ವತಂತ್ರನೆಂಬ ನುಡಿ ಎಂತಾಹದೊ ॥ ೧ ॥

ಉಣಿಸಿದರೆ ಉಣಿಪೆ ಉಡಿಸಿದರೆ ಉಡಿಪೆ ।
ಕುಣಿಸಿದರೆ ಕುಣಿಪೆ ಮಣಿಸಿದರೆ ಮಣಿ- ।
ಪೆ ನಗುಸಿದರೆ ನಗುಪೆ ದಣಿಸಿದರೆ- ।
ದಣಿಪೆ ಧರಿಸಿದರೆ ಧರಿಪೆ ।
ಅನಿಸಿದರೆ ಅನಿಪೆ ಅರಿಸಿದರೆ ಅರಿಪೆ ।
ಗುಣಿಸಿದರೆ ಗುಣಿಪೆ ಗುಟಿಸಿದರೆ ಗುಟಿಪೆ ।
ಎಣಿಸಿದರೆ ಎಣಿಪೆ ಇಡಿಸಿದರೆ ಇಡಿಪೆ ।
ಮನಸು ಮೊದಲಾದ ಇಂದ್ರಿಯವೊಳಪೊಕ್ಕು ।
ದ್ವ್ಯಣುಕೆ ಮಿಗಿಲಾದ ಕಾಲ ಭೇದಗಳಿಂದ ।
ಇನಿತು ಎನ್ನಿಂದಲೆ ಪರಿಪರಿ ವ್ಯಾಪಾರ ।
ದಿವಸ ದಿವಸದಲ್ಲಿ ಬಿಡದೆ ಮಾಳ್ಪ ।
ಜಾಣ ವನಜ ಭವನಪೆತ್ತ ವಿಜಯವಿಠ್ಠಲರೇಯ ।
ನಿನಗಲ್ಲದೆ ಎನಗೆ ಸ್ವಾತಂತ್ರ ಉಂಟೇ ॥ ೨ ॥

ನಾನೆ ಸರ್ವದಾ ಸ್ವಾತಂತ್ರದವನಾದರೆ ।
ಹೀನವಾದ ಜನುಮ ಧರಿಸಿ ಬಂದೂ ।
ಶ್ವಾನ ಸೂಕಾರ ಗಾರ್ಧ ಗೃಧ ಜಂಬುಕ ಮಿಕ್ಕ ನಾನಾ ।
ಯೋನಿಯೊಳಗೆ ಬಂದು ದುಃಖಿಪೆನೇ ।
ಹಾನಿ ವೃದ್ಧಿಯಲ್ಲಿ ಬಳಲಿ ಬೆಂಡಾಗಿ ನಿ- ।
ತ್ಯ ನೆಲೆಗಾಣದಲೆ ಅಳಲುವೆನೊ ।
ನೀನೆ ಗತಿ ಎಂದು ಆರ್ತನಾಗಿ ನಿಂದು ।
ಮಾಣದೆ ಮೊರೆಇಟ್ಟು ಬೇಡುವೆನೆ ।
ಕಾಣದವನಾಗಿ ಕಂಡಲ್ಲಿ ತಿರುಗುತ್ತ ।
ದೀನ ಮಾನವರಿಗೆ ಆಲ್ಪರಿದು ।

ಗೇಣುದರ ಪೊರೆದು ಗತಿಗೆಟ್ಟು ಪುಣ್ಯವೆ ।
ನಾ ನೀಗಿದೆನೆಂಬೊ ಸೊಲ್ಲು ಮತ್ತೆಲ್ಲಿದೊ ।
ನಾನು ನಿನ್ನಾಧೀನ ಇಲ್ಲದಿರಲು ನಿತ್ಯ ।
ಅನಂತ ಸುಖವನು ಬಡಿಪೆನಯ್ಯಾ ।
ನೀನೆ ಸರ್ವ ಜಗತ್ಕಾರಣನಾಗಿದ್ದು ।
ಪ್ರಾಣಿಗೆ ನಡತಿ ತಪ್ಪಿದನು ಎಂದು ।
ಯೋನಿ ಯೋನಿಲಿ ಪೋಗಿಸಿ ಬಳಲಿ ಪದುಚಿತವೆ ।
ನೀ ನರಸಾದ ಕಾರಣದಿಂದೆ ಸಲ್ಲಿತು ।
ಬಾಣ ಹಸ್ತಾಂತಕ ವಿಜಯವಿಠ್ಠಲರೇಯ ।
ನಾನುಣಬಲ್ಲಿನೆ ನೀ ಮಾಡಿಸಿದ ಕರ್ಮಾ ॥ ೩ ॥

ಅವಲ್ಲಿ ನೋಡಲಿ ಆವಲ್ಲಿ ಆಡಲಿ ।
ಆವಲ್ಲಿ ಊಣಲಿ ಆವಲ್ಲಿ ಪೋಗಲಿ ।
ಆವಲ್ಲಿ ತಿರುಗಲಿ ಆವಲ್ಲಿ ಎರಗಲಿ ।
ಆವಲ್ಲಿ ಕಾಡಲಿ ಆವಲ್ಲಿ ಬೇಡಲಿ ।
ಆವಲ್ಲಿ ನಗಲಿ ಆವಲ್ಲಿ ಮಲಗಲಿ ।
ಆವಲ್ಲಿ ಬಯಸಲಿ ಆವಲ್ಲಿ ಕೇಳಲಿ ।
ಆವಲ್ಲಿ ಕೂಗಲಿ ಆವಲ್ಲಿ ಮೀಯಲಿ ।
ಆವಾವದಾವದು ಆವಾವದಾದರು ।
ದೇವೇಶನೆ ನೀನು ಭಾವದಲಿ ನಿಂದು ।
ಯಾವತ್ತು ಪ್ರೇರಾಣೆ ನೀ ಪೊದಗಿ ಮನ ।
ವೀವುತ್ತ ಮಾಣಿಗೆ ಆವ ದೋಷ ಗುಣಾವಳಿ ಎನಗಿಲ್ಲಾ ।
ದೇವಕಿ ನಂದನ ವಿಜಯವಿಠ್ಠಲರೇಯ ।
ಪಾವನ ಚರಿತ ಪಾವನ ನಾನಿಂದು ॥ ೪ ॥

ಉಚಿತವಾಗಲಿ ಮತ್ತನುಚಿತವಾಗಲಿ ಮನಸು ।
ಪ್ರಚಾರ ಮಾಡಿ ನೀನೆ ವಚನಾದಿ ಕರ್ಮಗಳ ।
ನಿಚಯ ಮಾಳ್ಪುದು ಖಚಿತವಾಗಿ ಎನಗೆ ।
ಸ ಚರಾಚರದಲ್ಲಿ ರುಚಿ ಅರುಚಿ ಪದಾರ್ಥ ।
ರಚಿಸಿರೆ ನಾನು ಸವಿಯೆ ಪಚನಗೈಸುವ ನೀನೆ ।
ಅಚಲ ಮೂರುತಿ ರಾಂಗ ವಿಜಯವಿಠ್ಠಲರೇಯ ।
ಮುಚುಕುಂದಗೊಲಿದ ನಮುಚಿಸೂದನ ಪಾಲಾ ॥ ೫ ॥

ನಿನ್ನಂಘ್ರಿ ನಂಬಿದಾದಾಸನು ದಾಸಗೆ ।
ಇನ್ನು ಪಾಪಗಳುಂಟೇನಯ್ಯಾ ವಿಜಯವಿಠ್ಠಲ ॥ ೬ ॥